## ಶ್ರೀ ವೈ. ಎಂ. ಶ್ರೀಧರ ರಾವ್ ಇವರಿಗೆ ಸನ್ಮಾನ

ಕ್ರಿಯಾಶೀಲ ಹಾಗೂ ಆದರ್ಶ ಅಧ್ಯಾಪಕರಾಗಿದ್ದ ಶ್ರೀ ವೈ. ಎಂ. ಶ್ರೀಧರ ರಾವ್ ಇವರನ್ನು ನಿಸ್ವಾರ್ಥ ಸೇವೆಗಾಗಿ ಇತ್ತೀಚೆಗೆ ಉಚ್ಚಿಲದ ಎಂ.ಎಸ್.ಪಿ. ಮೆಮೋರಿಯಲ್ ಮಹಾಲಕ್ಷ್ಮೀ ಆಂಗ್ಲಮಾಧ್ಯಮ ಶಾಲೆಯಲ್ಲಿ ಸನ್ಮಾನಿಸಲಾಯಿತು.




## "ಎಂ. ವ್ಯಾಸ" ಪ್ರಶಸ್ತಿ ಪ್ರದಾನ ಸಮಾರಂಭ

ಶಿವಬ್ರಾಹ್ಮಣ ಸಭಾ (ರಿ.) ಕಾಸರಗೋಡು ಸ್ಥಳೀಯ ಸಮಿತಿ ವತಿಯಿಂದ ಹಿರಿಯ ಸಾಹಿತಿ ಎಂ. ವ್ಯಾಸ ಇವರ ಹೆಸರಿನಲ್ಲಿ ಇವರ ಮಕ್ಕಳು ನೀಡುವ ಪ್ರಥಮ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ ಶ್ರೀ ಎ. ಈಶ್ವರಯ್ಯ ಇವರಿಗೆ ಪ್ರದಾನ ಮಾಡಲಾಯಿತು. ಕಲಾ ವಿಮರ್ಶಕ, ಹಿರಿಯ ಸಾಹಿತಿ, ಸಂಪನ್ಮೂಲ ವ್ಯಕ್ತಿ, ಛಾಯಾಗ್ರಾಹಕ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಈಶ್ವರಯ್ಯ ಗುರುತಿಸಿಕೊಂಡಿದ್ದಾರೆ. ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಾಲಯದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ನಡೆಯಿತು.



ಮುಂದಿನ ವರ್ಷಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಈ ಪ್ರಶಸ್ತಿ ನೀಡಲಾಗುವುದು ಎಂದು ಸಂಘಟಕ ಸಮಿತಿಯ ಪದಾಧಿಕಾರಿಗಳು ತಿಳಿಸಿದ್ದಾರೆ.

## ಶ್ರೀ ಪ್ರವೀಣಚಂದ್ರ ಶರ್ಮ ಇವರಿಗೆ "ಪ್ರೆಸಿಡೆಂಟ್ಸ್ ಟ್ರೋಫಿ"

ಇತ್ತೀಚೆಗೆ ಆಸ್ಟ್ರೇಲಿಯದ ಗೋಲ್ಡ್‌ಕೋಸ್ಟ್‌ಲ್ಲಿ ಜರುಗಿದ ಮೆಟ್‌ಲೈಫ್ ಇಂಡಿಯಾ ಇನ್ಸೂರೆನ್ಸ್‌ನ "ಪ್ರೆಸಿಡೆಂಟ್ಸ್ ಕಾನ್ಫರೆನ್ಸ್"ನಲ್ಲಿ ಭಾಗವಹಿಸಿದ ಶ್ರೀ ಪ್ರವೀಣಚಂದ್ರ ಶರ್ಮರವರಿಗೆ, ರಾಷ್ಟ್ರಮಟ್ಟದಲ್ಲಿ ಉನ್ನತ ಸಾಧನೆಗೈದ ಮೊದಲ ಹತ್ತು ಮ್ಯಾನೇಜರುಗಳಿಗೆ ನೀಡಲಾಗುವ "ಪ್ರೆಸಿಡೆಂಟ್ಸ್ ಟ್ರೋಫಿ"ಯನ್ನು ನೀಡಲಾಯಿತು. ಪದೋನ್ನತಿಯನ್ನು ಪಡೆದು ಸದ್ಯ ಮಂಗಳೂರಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇವರು ಕೆಂಚನಕೆರೆಯಲ್ಲಿ ವಾಸ್ತವ್ಯವಿರುವ ನಿವೃತ್ತ ಶಿಕ್ಷಕದಂಪತಿ ಜಾನಕಿ–ಹರಿಹರಶರ್ಮ ಇವರ ಸುಪುತ್ರರು.



## ಶ್ರೀ ಮಾರ್ಪಳ್ಳಿ ಆರ್. ಮಂಜುನಾಥ್‌ರವರ 'ಕೆಳದಿ ರಾಣಿ ಚೆನ್ನಮ್ಮ' ಕೃತಿ ಬಿಡುಗಡೆ

ದಿನಾಂಕ 30–11–2008ರಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಾರ್ತಾ ಇಲಾಖೆ, ಶಿವಮೊಗ್ಗ ಇವರ ಸಂಯುಕ್ತ ಆಶ್ರಯದಲ್ಲಿ ಮಾರ್ಪಳ್ಳಿ ಆರ್. ಮಂಜುನಾಥ್ ಇವರು ಬರೆದ 16ನೆಯ ಕೃತಿ 'ಕೆಳದಿ ರಾಣಿ ಚೆನ್ನಮ್ಮ' ಮಕ್ಕಳ ಐತಿಹಾಸಿಕ ಕಾದಂಬರಿಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಡಿ. ಮಂಜುನಾಥ್ ಬಿಡುಗಡೆ ಮಾಡಿದರು.

ಡಾ। ಕೆಳದಿ ವೆಂಕಟೇಶ ಜೊಯಿಸ್ ಕೃತಿಯ ಬಗ್ಗೆ ಮಾತನಾಡಿ, ಈ ಕೃತಿಯಲ್ಲಿನ ಭಾಷೆಯು ಸರಳ, ಸುಂದರವಾಗಿದ್ದು, ಕಥೆಯು ಓದಿಸಿಕೊಂಡು ಹೋಗುತ್ತದೆ ಎಂದು ತಿಳಿಸಿದರು. ಮಾರ್ಪಳ್ಳಿ ಆರ್. ಮಂಜುನಾಥ್‌ರವರು ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳುತ್ತಾ ಕನ್ನಡದ ರಾಣಿ ಚೆನ್ನಮ್ಮ ವೀರೆ – ಧೀರೆ. ಮರಾಠ ರಾಜನಾದ ರಾಜರಾಮನಿಗೆ ಆಶ್ರಯ ನೀಡಿ, ಔರಂಗಜೇಬನನ್ನು ಯುದ್ಧದಲ್ಲಿ ಸೋಲಿಸಿ ಹಿಮ್ಮೆಟ್ಟಿಸಿದ ಯಶೋಗಾಥೆ ಇಂದಿನ ಮಕ್ಕಳಿಗೆ ಸ್ಫೂರ್ತಿದಾಯಕ ಎಂದರು.

ಶ್ರೀಮತಿ ಗಿರಿಜಾ ಸತ್ಯನಾರಾಯಣ್‌ರವರು ಪ್ರಾರ್ಥನೆ ಮಾಡಿದರು. ವಾರ್ತಾಧಿಕಾರಿ ಶ್ರೀ ದೇವರಾಜಯ್ಯನವರು ಸ್ವಾಗತಿಸಿದರು. ಸಂಗಮೇಶ್ವರ ಇವರು ವಂದನಾರ್ಪಣೆ ಸಲ್ಲಿಸಿದರು. ಮೊದಲಿಗೆ ದೇಶದ ಮಾಜಿ ಪ್ರಧಾನಿ ಮಾನ್ಯಶ್ರೀ ವಿ.ಪಿ. ಸಿಂಗ್‌ರವರ ನಿಧನ ಮತ್ತು ಮುಂಬೈಯಲ್ಲಿ ಭಯೋತ್ಪಾದಕರ ಕೃತ್ಯದಿಂದ ಮಡಿದ ಸಾರ್ವಜನಿಕರಿಗೆ, ವೀರ ಯೋಧರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಿ ಸಭೆಯನ್ನು ಪ್ರಾರಂಭಿಸಲಾಯಿತು.



### ವೇದವೇದಾಂಗಗಳೆಂದರೇನು?

(...2ನೇ ಪುಟದಿಂದ)

ಕಂಡ ವೇದವೇ ಅಥರ್ವಾಂಗಿರಸವೇದವೆಂದು ಪ್ರಸಿದ್ಧವಾಯಿತು. ಕಾಲಕ್ರಮೇಣ ಈ ವೇದ ಅಥರ್ವವೇದವೆಂದೇ ಪ್ರಖ್ಯಾತವಾಯಿತು.

ಯಾಗಗಳಲ್ಲಿ ನಾಲ್ವರು ಋತ್ವಿಜರಿರುತ್ತಾರೆ – ಹೋತೃ, ಅಧ್ವರ್ಯು, ಉದ್ಗಾತೃ ಮತ್ತು ಬ್ರಹ್ಮ. ಹೋತೃವಿಗೆ ಋಗ್ವೇದ, ಅಧ್ವರ್ಯುವಿಗೆ ಯಜುರ್ವೇದ, ಉದ್ಗಾತೃವಿಗೆ ಸಾಮವೇದ ಮತ್ತು ಬ್ರಹ್ಮನಿಗೆ ಅಥರ್ವವೇದವೆಂದು ನಿಯುಕ್ತವಾಗಿವೆ.

ಥರ್ವ ಎಂದರೆ ಚಲಿಸುವುದು. ಅರ್ಥಾತ್ ಚಂಚಲ ಎಂದರ್ಥ. ಇದಕ್ಕೆ ವಿರುದ್ಧವಾದುದೇ ಅಥರ್ವ. ಎಂದರೆ ನಿಶ್ಚಲವಾದುದೆಂದರ್ಥ. ಈ ಮಂತ್ರಗಳಿಂದ ಚಂಚಲತೆ ದೂರವಾಗಿ ನಿಶ್ಚಲತೆ ಸಿದ್ಧಿಸುವುದೆಂದು ತಾತ್ಪರ್ಯ.

ಅಥರ್ವವೇದಕ್ಕೆ ಅನೇಕ ಹೆಸರುಗಳಿವೆ. ಬ್ರಹ್ಮವೇದ, ಅಂಗಿರೋವೇದ, ಅಥರ್ವಾಂಗಿಸಾಂವೇದ, ಭೃಗ್ವಾಂಗಿರಸಾಂವೇದ, ಕ್ಷತ್ರವೇದ, ಭೈಷಜ್ಯವೇದ, ಛಂದೋವೇದ ಎಂಬುದಾಗಿ. ಬ್ರಹ್ಮ ಸಾಕ್ಷಾತ್ಕಾರಕ್ಕೆ ಸಾಧನವಾದುದರಿಂದ ಇದನ್ನು ಬ್ರಹ್ಮವೇದವೆಂದು ಕರೆಯಲಾಗಿದೆ.

ಇದಕ್ಕೆ 9 ಶಾಖೆಗಳಿವೆ ಎಂದು ಮಹಾಭಾಷ್ಯದ ಪತಂಜಲಿಗಳು ಹೇಳುತ್ತಾರೆ. ಪೈಪ್ಪಲಾದ, ಸ್ತೌದ, ಮೌದ, ಶೌನಕೀಯ, ಜಾಜಲ, ಜಲದ, ಬ್ರಹ್ಮವದ, ದೇವದರ್ಶ, ಚಾರಣವೈದ್ಯ ಎಂದು ಅವುಗಳನ್ನು ಹೆಸರಿಸಿದ್ದಾರೆ. ಅವುಗಳಲ್ಲಿ ಸಿಕ್ಕಿರುವುದು ಪೈಪ್ಪಲಾದ ಮತ್ತು ಶೌನಕೀಯ ಮಾತ್ರ.

ಅಥರ್ವವೇದದಲ್ಲಿ ಒಟ್ಟು 5987 ಮಂತ್ರಗಳಿವೆ. ಪೈಪ್ಪಲಾದ ಶಾಖೆಗಿಂತ ಶೌನಕೀಯ ಶಾಖೆಯೇ ಹೆಚ್ಚು ಪ್ರಚಲಿತ. ಇದರಲ್ಲಿ ಇಪ್ಪತ್ತು ಕಾಂಡಗಳಿವೆ. ಇಪ್ಪತ್ತನೆಯ ಕಾಂಡದಲ್ಲಿರುವುದೆಲ್ಲ ಋಕ್ಕುಗಳೇ.

ಅಥರ್ವದಲ್ಲಿ ಬರುವ ವಿಷಯಗಳನ್ನು ಅನುಸರಿಸಿ ಸೂಕ್ತಗಳನ್ನು ಹತ್ತುವಿಧವಾಗಿ ವಿಭಜಿಸಲಾಗಿದೆ.

1) ಭೈಷಜ್ಯ ಸೂಕ್ತಗಳು 2) ಆಯುಃ ಸೂಕ್ತಗಳು 3) ಪೌಷ್ಟಿಕ ಸೂಕ್ತಗಳು 4) ಆಭಿಚಾರಿಕ ಸೂಕ್ತಗಳು 5) ಪ್ರಾಯಶ್ಚಿತ್ತ ಸೂಕ್ತಗಳು 6) ಸ್ತ್ರೀಕರ್ಮ ಸೂಕ್ತಗಳು 7) ರಾಜಕರ್ಮಸೂಕ್ತಗಳು 8) ಸೌಮನಸ್ಯ ಸೂಕ್ತಗಳು 9) ಪಾಪನಿರ್ವಹಣ ಸೂಕ್ತಗಳು 10) ಬ್ರಹ್ಮಣ್ಯ ಸೂಕ್ತಗಳು

ಇವುಗಳಲ್ಲಿ ಕೊನೆಯದೊಂದನ್ನು ಬಿಟ್ಟರೆ ಮಿಕ್ಕವುಗಳು ಲೌಕಿಕ ಜೀವನಕ್ಕೆ ಸಂಬಂಧಿಸಿದವುಗಳೇ. ಬ್ರಹ್ಮಣ್ಯ ಸೂಕ್ತಗಳು ಮಾತ್ರ ಪರಬ್ರಹ್ಮತ್ತ್ವವನ್ನು ವಿವೇಚಿಸುತ್ತವೆ. ಈ ವೇದದಲ್ಲಿ ಲೌಕಿಕ ವಿಷಯಗಳೇ ಪ್ರಧಾನವಾದುದರಿಂದಲೋ ಏನೋ ವೇದಗಳಲ್ಲಿ ಮೂರು ವೇದಗಳೇ ಪರಿಗಣಿತವಾಗಿ 'ತ್ರಯೀ ವಿದ್ಯಾ' ಎಂಬ ಪ್ರಸಿದ್ಧಿಯುಂಟಾಗಿದೆ.

ಅಥರ್ವದ ಬ್ರಾಹ್ಮಣ್ಯಗಳಲ್ಲಿ ಒಂದೇ ಒಂದು ದೊರಕಿದೆ. ಅದೇ ಗೋಪಥ ಬ್ರಾಹ್ಮಣ. ಇದನ್ನು ರಚಿಸಿದ್ದು ಗೋಪಥ ಎಂಬ ಋಷಿ. ಇದನ್ನು ಪೂರ್ವಗೋಪಥ ಮತ್ತು ಉತ್ತರಗೋಪಥವೆಂದು ವಿಭಜಿಸುತ್ತಾರೆ.

ಅಥರ್ವಕ್ಕೆ ಸೇರಿದ ಆರಣ್ಯಕ ಯಾವುದೂ ಇಲ್ಲ. ಇದಕ್ಕೆ ಮೂರು ಉಪನಿಷತ್ತುಗಳಿವೆ – ಪ್ರಶ್ನೋಪನಿಷತ್, ಮುಂಡಕೋಪನಿಷತ್ ಮತ್ತು ಮಾಂಡೂಕ್ಯೋಪನಿಷತ್ ಎಂದು. □

ಉಡುಪಿ ವಿಶಿಷ್ಟ ರುಚಿಯುಳ್ಳ
Rao's 'ಮಾತೃಛಾಯಾ'ರವರ
ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪಿಮಿಡಿ ಹಾಗೂ ಮಿಡಿ ಉಪ್ಪಿನಕಾಯಿ
ಹಪ್ಪಳ ಹಾಗೂ ಸೆಂಡಿಗೆಗಳು, ಶುದ ದನದ ತುಪ್ಪ ಹಾಗೂ ಜೇನು ತುಪ್ಪ
-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-
ಭಾರತ್ ಸ್ಟೋರ್ಸ್
ರಥಬೀದಿ, ಉಡುಪಿ - 576 101. ಫೋನ್ : 2522444

PRAMOD AUTOMOBILES
KARANGALPADY, MANGALORE - 575 003.
Ph : 2491723 (O)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. : Ln. K. HARSHA KUMAR

ಸದಾಶಯ
ಸ್ಥಾನಿಕ ಬ್ರಾಹ್ಮಣ ವಧೂ-ವರರ ಮಾಹಿತಿ ಕೇಂದ್ರ
ಚಿಟ್ಪಾಡಿ, ಉಡುಪಿ.
: ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ :
ಎಂ. ಸದಾನಂದರಾವ್ ಮತ್ತು ಎಂ. ಸಂತೋಷರಾವ್, ಚಿಟ್ಪಾಡಿ, ಉಡುಪಿ
Ph : 2522638, 2523394

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
ಫೋನ್ : 2454355, ಮೊಬೈಲ್ : 94485 45702

ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ
